**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತಾರನೆಯ ಅಧಿವೇಶನ**

# ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–53)**
**(ಕರ್ನಾಟಕ ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.-** ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರಲ್ಲಿ,-

(i) 2ನೇ ಪ್ರಕರಣದ (9)ನೇ ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(9ಎ) "ಪಟ್ಟಿ ಮಾಡಲಾದ ವೃತ್ತಿಪರರು" ಎಂದರೆ, ವೃತ್ತಿಪರರಾದ ವಾಸ್ತುಶಿಲ್ಪಿಗಳು, ಇಂಜಿನಿಯರುಗಳು, ರಚನಾ ವಿನ್ಯಾಸ ಸಮಾಲೋಚಕರು, ಯಾಂತ್ರಿಕ, ವಿದ್ಯುನ್ಮಾನ ಮತ್ತು ಕೊಳಾಯಿ ಸಂಬಂಧಿ (ಎಂಇಪಿ) ಸಲಹೆಗಾರರು, ಪಟ್ಟಣ ಯೋಜಕರು, ಪರಿಸರ ಸಮಾಲೋಚಕರು ಮುಂತಾದವರು ಸಂದರ್ಭಾನುಸಾರ ಕಟ್ಟಡ ನಿರ್ಮಾಣದ ಮೊದಲು, ನಿರ್ಮಾಣದ ಸಮಯದಲ್ಲಿ ಮತ್ತು ನಂತರ ಪರಿಶೀಲಿಸಲು, ಅನುಮೋದಿತ ಯೋಜನೆಗಳ ಉಪಬಂಧಗಳನುಸಾರ ಮಾಡಲಾದ ನಿರ್ಮಾಣಗಳನ್ನು ಪ್ರಮಾಣೀಕರಿಸಲು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ವರದಿ ಮಾಡಲು ಹಾಗೂ ಸರ್ಕಾರವು ಅಧಿಸೂಚಿಸಿದಂತೆ ಕೆಲವು ಕಟ್ಟಡಗಳ ಕಟ್ಟಡ ನಕ್ಷೆಗಳನ್ನು ಮಂಜೂರು ಮಾಡಲು ಸಹ ಸ್ಥಳೀಯ ಪ್ರಾಧಿಕಾರದಿಂದ ಅಧಿಕೃತಗೊಳಿಸಿದ ವ್ಯಕ್ತಿಗಳು ಎಂಬುದಾಗಿ ಪಟ್ಟಿ ಮಾಡಲಾದವರು".

(ii) ಪ್ರಕರಣ 180ರಲ್ಲಿ,-

(ಎ) ಉಪ-ಪ್ರಕರಣ (1)ರಲ್ಲಿ "ಮುನ್ಸಿಪಲ್ ಕೌನ್ಸಿಲ್‌ನ" ಎಂಬ ಪದಗಳ ಬದಲಿಗೆ "ಮುನಿಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಉಪ-ಪ್ರಕರಣ (4)ರಲ್ಲಿ "ಎರಡು ನೂರು ರೂಪಾಯಿಗಳವರೆಗೆ" ಎಂಬ ಪದಗಳ ಬದಲಿಗೆ "ಎರಡು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) ಪ್ರಕರಣ 184ರಲ್ಲಿ,-

(ಎ) ಉಪ-ಪ್ರಕರಣ (1)ರಲ್ಲಿ "ಮುನ್ಸಿಪಲ್ ಕೌನ್ಸಿಲ್‌ನಿಂದ" ಎಂಬ ಪದಗಳ ಬದಲಿಗೆ "ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಉಪ-ಪ್ರಕರಣ (2)ರಲ್ಲಿ "ಮುನ್ಸಿಪಲ್ ಕೌನ್ಸಿಲ್" ಎಂಬ ಪದಗಳ ಬದಲಿಗೆ "ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) ಪ್ರಕರಣ 187ರಲ್ಲಿ,-

(ಎ) ಉಪ-ಪ್ರಕರಣ (1)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಯಾವುದೇ ಕಟ್ಟಡವನ್ನು ನಿರ್ಮಿಸುವ ಅಥವಾ ಈಗಿರುವ ಯಾವುದೇ ಕಟ್ಟಡಕ್ಕೆ ಹೊರಗೆ ಮಾರ್ಪಾಟು ಮಾಡುವ ಅಥವಾ ಅದಕ್ಕೆ ಸೇರಿಸುವ ಅಥವಾ ಯಾವ ಕಟ್ಟಡವನ್ನು ತೆಗೆದುಹಾಕಲು ಅಥವಾ ಯಾವ ಕಟ್ಟಡದ ನಿರ್ಮಾಣವನ್ನು ಹಿಂದಕ್ಕೆ ಸರಿಸಲು ಅಧಿಕಾರ ನೀಡಲಾಗಿದೆಯೋ ಆ ಯಾವುದೇ ಕಟ್ಟಡದ ಯಾವುದೇ ಮುಂಚಾಚಿರುವ ಭಾಗವನ್ನು ಅಥವಾ ಯಾವ ಕಟ್ಟಡದ ನಿರ್ಮಾಣಕ್ಕೆ ಅಥವಾ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮುನ್ಸಿಪಲ್ ಕೌನ್ಸಿಲ್‌ಗೆ 181ನೇ ಪ್ರಕರಣದ ಮೂಲಕ ಅಧಿಕಾರ ನೀಡಲಾಗಿದೆಯೋ ಆ ಕಟ್ಟಡವನ್ನು ನಿರ್ಮಿಸುವುದಕ್ಕೂ ಮೊದಲು ಅಥವಾ ಪುನರ್ ನಿರ್ಮಿಸುವುದನ್ನು ಪ್ರಾರಂಭಿಸುವುದಕ್ಕೂ ಮೊದಲು, ಹಾಗೆ ನಿರ್ಮಿಸಲು, ಮಾರ್ಪಾಟು ಮಾಡಲು, ಸೇರಿಸಲು ಅಥವಾ ಪುನರ್ ನಿರ್ಮಿಸಲು ಉದ್ದೇಶಿಸುವ ವ್ಯಕ್ತಿಯು, ವೆಬ್ ಪೋರ್ಟಲ್ ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಅದೇ ಸಮಯದಲ್ಲಿ ಅಂಥ ಕಟ್ಟಡದ ತಳಪಾಯವನ್ನು ಮತ್ತು ಅತಿ ಕೆಳಗಿನ ನೆಲ ಅಂತಸ್ತಿನ ಮಟ್ಟಗಳನ್ನು, ಮುನ್ಸಿಪಲ್ ಕೌನ್ಸಿಲ್‌ಗೆ ತಿಳಿದಿರುವ ಯಾವುದೇ ಮಟ್ಟವನ್ನು ತಿಳಿಸಿ ಯಾವ ಮಟ್ಟಗಳಲ್ಲಿ ನಿರ್ಮಿಸಲು ಪ್ರಸ್ತಾವಿಸಲಾಗಿದೆಯೋ ಆ ಮಟ್ಟಗಳನ್ನು ತೋರಿಸುವ ನಕ್ಷೆಯನ್ನು, ಮತ್ತು ಪ್ರಸ್ತಾವಿತ ಕಟ್ಟಡದ ಪರಿಮಿತಿಗಳು, ಉದ್ದಗಲ, ವಿನ್ಯಾಸ, ವಾಯು ಸಂಚಾರ, ಸಾಮಗ್ರಿಗಳ ಬಗ್ಗೆ ಬೈಲಾಗಳಲ್ಲಿ ಅಗತ್ಯಪಡಿಸಿದ ಅಥವಾ ಮುನ್ಸಿಪಲ್ ಕೌನ್ಸಿಲ್ ತಗಾದೆ ಮಾಡಿದ ಎಲ್ಲಾ ಮಾಹಿತಿಯನ್ನು ಮತ್ತು ಅದಕ್ಕೆ ಸಂಬಂಧಿಸಿದಂತೆ ಬಳಸಬೇಕಾದ ಚರಂಡಿಗಳು, ಗ್ರಾಮಸಾರ ಚರಂಡಿಗಳು, ಕಕ್ಕಸುಗಳು, ಶೌಚಗೃಹಗಳು ಮತ್ತು ರೊಚ್ಚುಗುಂಡಿಗಳು ಯಾವುದಾದರೂ ಇದ್ದರೆ ಅವುಗಳ ಉದ್ದೇಶಿತ ಸ್ಥಳ ಮತ್ತು ನಿರ್ಮಾಣದ ಬಗ್ಗೆ ಯಾವುದೇ ಈಗಿರುವ ಅಥವಾ ಯೋಜಿತ ಬೀದಿಗಳಿಗೆ ಸಂಬಂಧಪಟ್ಟಂತೆ ಕಟ್ಟಡದ ಸ್ಥಳವನ್ನು ಹಾಗೂ ಕಟ್ಟಡವನ್ನು ಯಾವ ಉದ್ದೇಶಕ್ಕಾಗಿ ಬಳಸಬೇಕಾಗಿದೆಯೋ ಆ ಉದ್ದೇಶದ ಬಗ್ಗೆ ಸರ್ಕಾರವು ಅಧಿಸೂಚಿಸಿದಂಥ ಕಟ್ಟಡಗಳ ಸಂದರ್ಭದಲ್ಲಿ ಲೈಸೆನ್ಸುಳ್ಳ ವೃತ್ತಿಪರರ ಸ್ವ-ಪ್ರಮಾಣೀಕರಣಕ್ಕೆ (self-certification) ಸಂಬಂಧಿಸಿದ ದಸ್ತಾವೇಜಿಗಳನ್ನು ಒಳಗೊಂಡು ಎಲ್ಲ ಮಾಹಿತಿಯನ್ನು ಮುನ್ಸಿಪಲ್ ಕೌನ್ಸಿಲ್‌ಗೆ ಒದಗಿಸತಕ್ಕದ್ದು."

(ಬಿ) ಹಾಗೇ ಪ್ರತಿಯೋಜಿಸಲಾದ ಉಪ-ಪ್ರಕರಣ (1)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**(1ಎ). ಕರಗಳು, ನಿರ್ಬಂಧಗಳು ಮತ್ತು ಷರತ್ತುಗಳ ವಿಧಿಸುವಿಕೆ.-** (1) ಮುನ್ಸಿಪಲ್ ಕೌನ್ಸಿಲ್ ನಕ್ಷೆಯನ್ನು ಅನುಮೋದಿಸಲು ಅಥವಾ ಮಂಜೂರು ಮಾಡಲು ಅಥವಾ ಪ್ರಾರಂಭ ಪ್ರಮಾಣಪತ್ರ ಅಥವಾ ಅಧಿಭೋಗ ಪ್ರಮಾಣಪತ್ರವನ್ನು ನೀಡಲು, ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34) ರ ಉಪಬಂಧಗಳ ಅಡಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ನಿಗದಿಪಡಿಸಿದ ಮಾರ್ಗಸೂಚಿ ಮೌಲ್ಯದ ಆಧಾರದ ಮೇಲೆ ಅಥವಾ ವಾರ್ಷಿಕ ಹೆಚ್ಚಳದೊಂದಿಗಿನ ಯಾವುದೇ ನಿಗದಿತ ದರಗಳ ಆಧಾರದ ಮೇಲೆ ನಿಯಮಗಳು ಅಥವಾ ಉಪವಿಧಿಗಳಲ್ಲಿ ನಿಯಮಿಸಬಹುದಾದಂಥ ದರಗಳಲ್ಲಿ ಈ ಮುಂದಿನ ಶುಲ್ಕವನ್ನು ವಿಧಿಸಬಹುದು ಮತ್ತು ವಸೂಲು ಮಾಡಬಹುದು, ಎಂದರೆ.-

(i) ಲೈಸೆನ್ಸು ನೀಡಿಕೆಗಾಗಿ ಶುಲ್ಕ;

(ii) ಲೈಸೆನ್ಸು ಮಂಜೂರು ಮಾಡಲಾದ ಕಟ್ಟಡಕ್ಕಾಗಿ ಭದ್ರತಾ ಶುಲ್ಕ;

(iii) ನಿರ್ಮಾಣದ ಸಮಯದಲ್ಲಿ ಸಾರ್ವಜನಿಕ ರಸ್ತೆಗಳ ನಿರ್ವಹಣೆ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣ ಸಾಮಗ್ರಿಗಳ ಶೇಖರಣೆಗಾಗಿ ಶುಲ್ಕ, ಅಂದರೆ ನೆಲ ಬಾಡಿಗೆ;

(iv) ನಿರ್ಮಾಣವು ಮಂಜೂರಾದ ಯೋಜನೆಯ ಅನುಸಾರವಾಗಿರುವುದನ್ನು ಖಚಿತಪಡಿಸಲು ಭದ್ರತಾ ಶುಲ್ಕ;

(v) ಪ್ರಾರಂಭ ಪ್ರಮಾಣಪತ್ರಕ್ಕಾಗಿ ಶುಲ್ಕ;

(vi) ಅಧಿಭೋಗ ಪ್ರಮಾಣಪತ್ರಕ್ಕಾಗಿ ಶುಲ್ಕ;

(vii) ಪ್ರಾಧಿಕಾರದ ಅಗತ್ಯತೆಗಳಿಗೆ ಸಂಬಂಧಿಸಿದಂತೆ ಪಟ್ಟಿ ಮಾಡಲಾದ ವೃತ್ತಿಪರರು ಒದಗಿಸುವ ಸೇವೆಗಳಿಗಾಗಿ ಕಟ್ಟಡಗಳ ಮಾಲೀಕರು ಭರಿಸಬೇಕಾದ ಶುಲ್ಕ.

(viii) ನಿರ್ಮಾಣದ ಪ್ರಾರಂಭದಲ್ಲಿ ಪ್ರಾರಂಭ ಪ್ರಮಾಣ ಪತ್ರವನ್ನು ಪಡೆಯದಿದ್ದಕ್ಕಾಗಿ ಅಧಿಭೋಗ ಪ್ರಮಾಣ ಪತ್ರವನ್ನು ನೀಡುವ ಸಮಯದಲ್ಲಿ ವಿಧಿಸುವ ದಂಡ.

(ix) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮಂಜೂರಾದ ನಕ್ಷೆ ಅಥವಾ ವಲಯ ನಿಯಂತ್ರಣ ಮಿತಿಗೆ ಸಂಬಂಧಿಸಿದಂತೆ ನಿರ್ಮಾಣದಲ್ಲಿನ ಉಲ್ಲಂಘನೆ ಅಥವಾ ಮಾರ್ಗ ಪಲ್ಲಟದ ವ್ಯಾಪ್ತಿಯವರೆಗೆ ಕ್ರಮಬದ್ಧಗೊಳಿಸುವುದಕ್ಕಾಗಿ ದಂಡ; ಮತ್ತು

(x) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಥವಾ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂಥ ಇತರ ಶುಲ್ಕ."

(v) ಪ್ರಕರಣ 190ರಲ್ಲಿ, ಉಪ-ಪ್ರಕರಣ (2)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2ಎ) ಅದಿಭೋಗ ಪ್ರಮಾಣ ಪತ್ರವನ್ನು ಪಡೆಯುವುದರಿಂದ ವಿನಾಯಿತಿಸಬೇಕಾದ ಕಟ್ಟಡಗಳ ಪ್ರವರ್ಗವನ್ನು ಸರ್ಕಾರವು ಅಧಿಸೂಚಿಸಬಹುದು."

(vi) ಪ್ರಕರಣ 208ರಲ್ಲಿನ ಉಪ-ಪ್ರಕರಣ (1) ಮತ್ತು ಉಪ-ಪ್ರಕರಣ (3)ರಲ್ಲಿ, "ಮುನ್ಸಿಪಲ್ ಕೌನ್ಸಿಲ್" ಎಂಬ ಪದಗಳ ಬದಲಿಗೆ "ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(vii) ಪ್ರಕರಣ 256ರಲ್ಲಿ,-

(ಎ) ಉಪ-ಪ್ರಕರಣ (1)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತೆ ಅಥವಾ ಸರ್ಕಾರವು ಅಧಿಸೂಚಿಸಿದಂತೆ ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು ಈ ಕುರಿತು ಮಂಜೂರು ಮಾಡಿದ ಲೈಸೆನ್ಸಿನ ನಿಬಂಧನೆಗಳನ್ನು ಅನುಸರಿಸದೆ ಅಥವಾ ಅನ್ಯಥಾ ಯಾವುದೇ ಉದ್ದೇಶಗಳಿಗಾಗಿ ಯಾವುದೇ ಆವರಣಗಳನ್ನು ಯಾರೇ ವ್ಯಕ್ತಿಯು ಬಳಸತಕ್ಕದ್ದಲ್ಲ ಅಥವಾ ಬಳಸಲು ಅನುಮತಿಸತಕ್ಕದ್ದಲ್ಲ:

ಪರಂತು, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಅಧಿನಿಯಮ, 2006 (2006ರ ಕೇಂದ್ರ ಅಧಿನಿಯಮ 27)ರಡಿಯಲ್ಲಿ ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ನೋಂದಾಯಿಸಿರುವ ಎಲ್ಲಾ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಮತ್ತು ಕೈಗಾರಿಕಾ ಸಹಾಯ ಸಚಿವಾಲಯ, ಕೈಗಾರಿಕಾ ನೀತಿ ಮತ್ತು ಪ್ರಚಾರ ಇಲಾಖೆ, ಭಾರತ ಸರ್ಕಾರ ಇದರೊಂದಿಗೆ ಕೈಗಾರಿಕಾ ಉದ್ಯಮಿಗಳ ಜ್ಞಾಪಕ ಪತ್ರ ಅಥವಾ ಕೈಗಾರಿಕಾ ಲೈಸೆನ್ಸನ್ನು ದಾಖಲಿಸಿರುವ ದೊಡ್ಡ ಕೈಗಾರಿಕೆಗಳಿಗೆ ವ್ಯಾಪಾರ ಲೈಸೆನ್ಸನ್ನು ಪಡೆಯುವುದರಿಂದ ವಿನಾಯಿತಿ ನೀಡಲಾಗುತ್ತದೆ."

(ಬಿ) ಉಪ-ಪ್ರಕರಣ (2)ರಲ್ಲಿ "XIIIನೇ ಅನುಸೂಚಿಯ Iನೇ ಹಾಗೂ IIನೇ ಭಾಗದಲ್ಲಿ ನಮೂದಿಸಿರುವ" ಎಂಬ ಅಕ್ಷರಗಳು ಮತ್ತು ಪದಗಳ ಬದಲಿಗೆ "ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತೆ ಅಥವಾ ಸರ್ಕಾರವು ಅಧಿಸೂಚಿಸಿದಂತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) ಉಪ-ಪ್ರಕರಣ (4)ರಲ್ಲಿ,-

(i) "(1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ" ಎಂಬ ಪದಗಳ ಬದಲಿಗೆ "ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತೆ ಅಥವಾ ಸರ್ಕಾರವು ಅಧಿಸೂಚಿಸಿದಂತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

(ಡಿ) ಉಪ-ಪ್ರಕರಣ (6)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(6) ಉಪ-ಪ್ರಕರಣ (1), ಅಥವಾ (2) ಅಥವಾ (3)ರ ಅಥವಾ 324ನೇ ಪ್ರಕರಣದ ಉಪ-ಪ್ರಕರಣ (1)ರಡಿ ರಚಿಸಲಾದ ಯಾವುದೇ ಬೈಲಾದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಆವರಣಗಳನ್ನು ಬಳಸಿದ ಯಾರಾದರೂ ದಂಡದೊಂದಿಗೆ ದಂಡಿತನಾಗತಕ್ಕದ್ದು."

(ಇ) ಉಪ-ಪ್ರಕರಣ (7)ರಲ್ಲಿ "ಉಪ-ಪ್ರಕರಣ (1)ರ (ಎ) ಅಥವಾ (ಬಿ) ಖಂಡದಲ್ಲಿ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳ ಬದಲಿಗೆ "ಉಪ-ಪ್ರಕರಣ (1)ರಲ್ಲಿ" ಎಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

(viii) ಪ್ರಕರಣ 324ರ ಉಪ-ಪ್ರಕರಣ (1)ರಲ್ಲಿ,-

(ಎ) ಖಂಡ (ಸಿಸಿ)ಯಲ್ಲಿ "187ನೇ ಪ್ರಕರಣದ ಮೇರೆಗೆ" ಎಂಬ ಪದಗಳ ಬದಲಾಗಿ "ಅನುಮೋದಿತ ಯೋಜನೆಗಳ ಉಪಬಂಧಗಳ ಪ್ರಕಾರ ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ವರದಿ ಮಾಡಲು ಮತ್ತು ಸರ್ಕಾರವು ನಿಯಮಿಸಿದಂತೆ ಕೆಲವು ಕಟ್ಟಡಗಳ ಕಟ್ಟಡ ನಕ್ಷೆಗಳನ್ನು ಮಂಜೂರು ಮಾಡಲು ಮತ್ತು ಅವರ ಪಾತ್ರಗಳು, ಜವಾಬ್ದಾರಿಗಳು ಮತ್ತು ಉಲ್ಲಂಘನೆಯ ಪ್ರಕರಣಗಳಲ್ಲಿ ಅನ್ವಯವಾಗುವ ದಂಡದ ನಿಬಂಧನೆಗಳನ್ನು ಸ್ಪಷ್ಟವಾಗಿ ಪರಿಭಾಷಿಸಲು, ನಿರ್ಮಾಣದ ಮೊದಲು, ನಿರ್ಮಾಣದ ಸಮಯದಲ್ಲಿ ಮತ್ತು ನಂತರ ಕಟ್ಟಡ ಸ್ಥಳಗಳನ್ನು ಪರಿಶೀಲಿಸಲು ಮತ್ತು ಮಾಡಿದ

ನಿರ್ಮಾಣಗಳನ್ನು ಪ್ರಮಾಣೀಕರಿಸಲು ವಿವಿಧ ವೃತ್ತಿಪರರನ್ನು ತಮ್ಮ ಸೇವೆಗಳನ್ನು ಪಡೆಯಲು ಪಟ್ಟಿ ಮಾಡುವುದನ್ನು ಒಳಗೊಂಡಂತೆ " ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಖಂಡ (ಝಡ್)ರಲ್ಲಿ "ಮುನ್ಸಿಪಲ್ ಕೌನ್ಸಿಲ್" ಎಂಬ ಪದಗಳ ಬದಲಿಗೆ "ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ix) ಅನುಸೂಚಿ XIII ಮತ್ತು ಅದರೊಂದಿಗಿನ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**3. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.-** ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರಲ್ಲಿ,-

(i) ಪ್ರಕರಣ 176ರ ಉಪ-ಪ್ರಕರಣ (6)ರಲ್ಲಿನ (ಬಿ) ಖಂಡದ (ii)ನೇ ಉಪ-ಖಂಡದಲ್ಲಿ "ಯಾವುದೇ ಸ್ಥಿರ ಸ್ವತ್ತನ್ನು " ಎಂಬ ಪದಗಳಿಗೆ ಮೊದಲು "ಸರ್ಕಾರದ ಪೂರ್ವಾನುಮತಿಯ ಹೊರತು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) ಪ್ರಕರಣ 310ರಲ್ಲಿ ಉಪ-ಪ್ರಕರಣ (2)ರ ತರುವಾಯ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ಅದಿಭೋಗ ಪ್ರಮಾಣ ಪತ್ರವನ್ನು ಪಡೆಯುವುದರಿಂದ ವಿನಾಯಿತಿಸಲಾಗುವ ಕಟ್ಟಡಗಳ ಪ್ರವರ್ಗವನ್ನು ಸರ್ಕಾರವು ಅಧಿಸೂಚಿಸಬಹುದು."

(iii) ಪ್ರಕರಣ 353ರಲ್ಲಿ,-

(ಎ) ಉಪ-ಪ್ರಕರಣ (1)ರಲ್ಲಿ "ಅನುಸೂಚಿ Xರಲ್ಲಿ ನಿರ್ದಿಷ್ಟಪಡಿಸಿದ" ಎಂಬ ಪದಗಳು ಮತ್ತು ಅಕ್ಷರದ ಬದಲಿಗೆ "ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದ ಅಥವಾ ಸರ್ಕಾರವು ಅಧಿಸೂಚಿಸಿದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಉಪ-ಪ್ರಕರಣ (2)ರಲ್ಲಿ "ಅನುಸೂಚಿ Xರಲ್ಲಿ" ಎಂಬ ಪದಗಳು ಮತ್ತು ಅಕ್ಷರದ ಬದಲಿಗೆ "ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದ ಅಥವಾ ಸರ್ಕಾರವು ಅಧಿಸೂಚಿಸಿದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) ಅನುಸೂಚಿ X ಮತ್ತು ಅದರೊಂದಿಗಿನ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**4. ತೊಂದರೆಗಳನ್ನು ನಿವಾರಿಸುವ ಅಧಿಕಾರ.-** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸುವ ಉದ್ದೇಶಗಳಿಗಾಗಿ ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಉಪಬಂಧಗಳನ್ನು ರಚಿಸಬಹುದು:

(2) ಈ ಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಆದೇಶವನ್ನು ಸಾಧ್ಯವಾಧಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಈ ಮುಂದಿನವುಗಳಿಗಾಗಿ, ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) ಕಡಿತಗೊಳಿಸುವಿಕೆ ಮತ್ತು ಅನಿಯಂತ್ರಣಗೊಳುಸುವಿಕೆಯನ್ನು ಅನುಪಾಲಿಸುವುದಕ್ಕಾಗಿ ಭಾರತ ಸರ್ಕಾರದ ಶಿಫಾರಸ್ಸುಗಳನ್ನು ನಿಗಮಿತಗೊಳಿಸುವುದು;

(ii) ಕಟ್ಟಡ ನಕ್ಷೆಗಳ ಅನುಮತಿಗಳನ್ನು ಮಂಜೂರು ಮಾಡುವ ಕಾರ್ಯವಿಧಾನವನ್ನು ಸರಳೀಕರಿಸುವುದು;

(iii) ಅನುಮತಿಸಲಾದ ನಕ್ಷೆಗಳ ಉಪಬಂಧಗಳನುಸಾರ ನಿರ್ಮಾಣಗಳನ್ನು ಮಾಡಿರುವುದನ್ನು ಸ್ಪಷ್ಟಪಡಿಸಲು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ವರದಿ ನೀಡಲು, ಕಟ್ಟಡದ ನಿವೇಶನಗಳಿಗೆ ನಿರ್ಮಾಣದ ಮೊದಲು, ನಿರ್ಮಾಣದ ಸಮಯದಲ್ಲಿ ಮತ್ತು ಸಂದರ್ಭಾನುಸಾರ ನಿರ್ಮಾಣದ ತರುವಾಯ ಪಟ್ಟಿ ಮಾಡಲಾದ ವೃತಿಪರರನ್ನು ತಪಾಸಣೆ ಮಾಡಲು ಉಪಬಂಧಗಳನ್ನು ಪರಿಚಯಿಸುವುದು;

(iv) ಸ್ವಯಂ ಪ್ರಮಾಣೀಕರಣದ ಮುಖಾಂತರ ಸರ್ಕಾರವು ಅಧಿಸೂಚಿಸಿದಂತೆ ಕಟ್ಟಡಗಳಿಗೆ ಅನುಮತಿ ಮಂಜೂರು ಮಾಡುವುದನ್ನು ಒಳಗೊಳ್ಳುವುದು;

(v)ಉಲ್ಲಂಘನೆಯ ಪ್ರಕರಣಗಳಲ್ಲಿ ಪಟ್ಟಿ ಮಾಡಲಾದ ವೃತ್ತಿಪರರಿಗೆ ದಂಡನಾ ಉಪಬಂಧವನ್ನು ಒಳಗೊಳ್ಳುವುದು;

(vi)ಮಾಲೀಕರಿಂದ ಪಟ್ಟಿ ಮಾಡಲಾದ ವೃತ್ತಿಪರರು ಶುಲ್ಕವನ್ನು ಸಂಗ್ರಹಿಸುವುದನ್ನು ಒಳಗೊಂಡಂತೆ ಮುನ್ಸಿಪಾಲಿಟಿಗಳು ಲೆವಿಯನ್ನು ವಿಧಿಸುವುದಕ್ಕಾಗಿ ಉಪಬಂಧಗಳನ್ನು ಕಲ್ಪಿಸುವುದು;

(vii) ವ್ಯಾಪಾರ ಲೈಸೆನ್ಸ್‌ನ್ನು ತರ್ಕಬದ್ಧಗೊಳಿಸುವುದು.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ರಹೀಂ ಖಾನ್**
ಪೌರಾಡಳಿತ ಮತ್ತು ಹಜ್ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

## ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964

## (ಕರ್ನಾಟಕ ಅಧಿನಿಯಮ ಸಂಖ್ಯೆ 22)

## ಉದ್ಧೃತ ಭಾಗ

**180.ಬೀದಿಗಳ ನಿಯತ ರೇಖೆಯೊಳಗೆ ಕಟ್ಟಡಗಳ ನಿರ್ಮಾಣದ ನಿಯಂತ್ರಣ.-** (1) 208ನೇ ಪ್ರಕರಣದ ಉಪಬಂಧಗಳ ಪ್ರಕಾರವಲ್ಲದೆ, 187ನೇ ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲ್ನ ಅನುಮತಿ ಇಲ್ಲದೆ ಯಾರೇ ವ್ಯಕ್ತಿಯು ಸಾರ್ವಜನಿಕ ಬೀದಿಯ ನಿಯತ ರೇಖೆಯ ಒಳಗೆ ಯಾವುದೇ ಕಟ್ಟಡದ ಯಾವುದೇ ಭಾಗವನ್ನು ನರ್ಮಿಸತಕ್ಕದ್ದಲ್ಲ ಅಥವಾ ಪುನರ್ ನಿರ್ಮಿಸತಕ್ಕದ್ದಲ್ಲ.

**Xxx xxx xxx**

(4) ಉಪ-ಪ್ರಕರಣ (1) ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು, ಮತ್ತು ಮುನ್ಸಿಪಲ್ ಕೌನ್ಸಿಲ್,-

(ಎ) ಕಟ್ಟುವುದನ್ನು ನಿಲ್ಲಿಸತಕ್ಕದ್ದು ಎಂದು ನರ್ದೇಶಿಸಬಹುದು; ಮತ್ತು

(ಬಿ) ಬರಹದಲ್ಲಿ ನೋಟೀಸಿನ ಮೂಲಕ, ಅವಶ್ಯಕವೆಂದು ಅದು ಭಾವಿಸಬಹುದಾದಂತೆ ಅಂಥ ಕಟ್ಟಡವನ್ನು ಅಥವಾ ಅದರ ಭಾಗವನ್ನು ಮಾರ್ಪಾಟು ಮಾಡಲು ಅಥವಾ ಕೆಡವಲು ಅಗತ್ಯಪಡಿಸಬಹುದು.

ಕಟ್ಟಡಗಳು ಮೊದಲಾದವುಗಳನ್ನು ಕಟ್ಟುಕಟ್ಟಳೆಗಳಿಗೆ ಒಳಪಡಿಸಲು ಅಧಿಕಾರಗಳು

**Xxx xxx xxx**

**181. ಕಟ್ಟಡದ ಮುಂಚಾಚಿಕೊಂಡಿರುವ ಭಾಗಗಳನ್ನು ಹಿಂದಕ್ಕೆ ಇರುವಂತೆ ಮಾಡುವುದು.-** (1) ಕಟ್ಟಡದ ಯಾವುದೇ ಭಾಗವು, 179ನೇ ಪ್ರಕರಣದ ಮೇರೆಗೆ ಗೊತ್ತುಪಡಿಸಿದಂತೆ ಸರ್ವಜನಿಕ ಬೀದಿಯ ನಿಯತ ರೇಖೆಯಾಚೆ ಅದರ ಎರಡೂ ಪಕ್ಕದ ಕಟ್ಟಡದ ಮುಂಭಾಗದಿಂದ ಆಚೆಗೆ ಮುಂಚಾಚಿಕೊಂಡಿದ್ದರೆ ಮುನ್ಸಿಪಲ್ ಕೌನ್ಸಿಲ್,-

(ಎ) ಅದರ ಮುಂಚಾಚಿಕೊಂಡಿರುವ ಭಾಗವು ವರಾಂಡ, ಮೆಟ್ಟಿಲು ಅಥವಾ ಮುಖ್ಯ ಕಟ್ಟಡಕ್ಕೆ ಇತರ ಬಾಹ್ಯ ರಚನೆಯಾಗಿದ್ದರೆ, ಯಾವುದೇ ಕಾಲದಲ್ಲಿ; ಅಥವಾ

(ಬಿ) ಮುಂಚಾಚಿರುವ ಭಾಗವು ಹಿಂದೆ ಹೇಳಿದಂತೆ ಬಾಹ್ಯ ರಚನೆಯಾಗಿರದಿದ್ದರೆ, ಆಗ ಅಂಥ ಕಟ್ಟಡದ ದೊಡ್ಡದಾದ ಭಾಗವನ್ನು ಅಥವಾ ಅಂಥ ಮುಂಚಾಚಿದ ಯಾವುದೇ ಮುಖ್ಯ ಭಾಗವನ್ನು ಕೆಳಗಿಳಿಸಿರುವಾಗ ಅಥವಾ ಸುಟ್ಟು ಹಾಕಿದಾಗ ಅಥವಾ ಬಿದ್ದು ಹೋಗಿರುವಾಗ, ಬರಹದಲ್ಲಿನ ನೋಟೀಸಿನ ಮೂಲಕ, ನಿಯತ ರೇಖೆಯಿಂದಾಚೆ ಅಥವಾ ಅದರ ಎರಡೂ ಪಕ್ಕದಲ್ಲಿ ಹೊಂದಿಕೊಂಡಿರುವ ಕಟ್ಟಡದ ಸದರಿ ಮುಂಭಾಗದಿಂದಾಚೆ ಮುಂಚಾಚಿಕೊಂಡಿರುವ ಭಾಗವನ್ನು ಅಥವಾ ಆ ಭಾಗದ ಯಾವುದೇ ಭಾಗವನ್ನು ತೆಗೆದು ಹಾಕತಕ್ಕದ್ದೆಂದು ಅಥವಾ ಅಂಥ ಭಾಗವನ್ನು ಪುನರ್ ನರ್ಮಿಸುತ್ತಿರುವಾಗ ಅದು ಸದರಿ ನಿಯತ ರೇಖೆಯ ಅಥವಾ ಅಂಥ ಕಟ್ಟಡದ ಮುಂಭಾಗಕ್ಕೆ ಅಥವಾ ಅದರೆಡೆಗೆ ಹಿಂದೆ ಇರುವಂತೆ ಮಾಡತಕ್ಕದ್ದೆಂದು ಅಗತ್ಯಪಡಿಸಬಹುದು. ಮತ್ತು ಹಾಗೆ ಹಿಂದೆ ಸರಿಸಿರುವುದರಿಂದ ಅಥವಾ ತೆಗೆದುಹಾಕಿರುವುದರಿಂದ ಬೀದಿಗೆ ಸೇರಿಸಿದ ಭೂಮಿಯ ಭಾಗವನ್ನು ಆ ತರುವಾಯ ಸರ್ವಜನಿಕ ಬೀದಿಯ ಭಾಗವೆಂಬುದಾಗಿ ಭಾವಿಸತಕ್ಕದ್ದು ಮತ್ತು ಅದು ಮುನ್ಸಿಪಲ್ ಕೌನ್ಸಿಲ್ನಲ್ಲಿ ನಿಹಿತವಾಗತಕ್ಕದ್ದು.

**Xxx xxx xxx**

**184. ಕಟ್ಟಡಗಳ ಚಾವಣಿಗಳನ್ನು ಮತ್ತು ಹೊರಗೋಡೆಗಳನ್ನು ಸುಲಭ ದಹ್ಯ ಸಾಮಗ್ರಿಗಳಿಂದ ಮಾಡಿರತಕ್ಕದ್ದಲ್ಲ.-** (1) ಈ ಅಧಿನಿಯಮವು ಜಾರಿಗೆ ಬಂದ ತರುವಾಯ ನರ್ಮಿಸಿದ ಅಥವಾ ನವೀಕರಿಸಿದ ಕಟ್ಟಡಗಳ ಹೊರಚಾವಣಿಗಳನ್ನು ಮತ್ತು ಗೋಡೆಗಳನ್ನು ಮುನ್ಸಿಪಲ್ ಕೌನ್ಸಿಲ್ನಿಂದ ಬರಹದಲ್ಲಿ ಒಪ್ಪಿಗೆ ಪಡೆದಿದ್ದ ಹೊರತು ಹುಲ್ಲು, ಮರ, ಬಟ್ಟೆ, ತಟ್ಟು, ಎಲೆಗಳು, ಚಾಪೆಗಳು ಅಥವಾ ಇತರ ಸುಲಭ ದಹ್ಯ ಸಾಮಗ್ರಿಗಳಿಂದ ಮಾಡಿರತಕ್ಕದ್ದಲ್ಲ. ಲಿಖಿತ ಸಮ್ಮತಿಯನ್ನು ಪ್ರತ್ಯೇಕ ಸಂರ್ಭಗಳಲ್ಲಿ ಅಥವಾ ಸಾಮಾನ್ಯವಾಗಿ ಆ ಸಮ್ಮತಿಯಲ್ಲಿ ನರ್ದಿಷ್ಟಪಡಿಸಿದ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ಕೊಡಬಹುದು.

(2) ಮುನ್ಸಿಪಲ್ ಕೌನ್ಸಿಲ್ ಯಾವುದೇ ಕಾಲದಲ್ಲಿ ಬರಹದಲ್ಲಿನ ನೋಟೀಸಿನ ಮೂಲಕ ಹಿಂದೆ ಹೇಳಿದಂತೆ ಅಂಥ ಯಾವುದೇ ಸಾಮಗ್ರಿಗಳಿಂದ ಮಾಡಿದ ಹೊರಚಾವಣಿಯನ್ನು ಅಥವಾ ಗೋಡೆಯನ್ನು ಹೊಂದಿರುವಂಥ ಯಾವುದೇ ಕಟ್ಟಡದ ಒಡೆಯನನ್ನು ಅಂಥ ಚಾವಣಿಯನ್ನು ಅಥವಾ ಗೋಡೆಯನ್ನು ಈ ಅಧಿನಿಯಮವು ಜಾರಿಗೆ ಬಂದಂಥ ದಿನಾಂಕಕ್ಕೆ ಮುಂಚೆ ಮಾಡಿರಲಿ ಅಥವಾ ಮಾಡಿರದಿರಲಿ ಮತ್ತು ಅದನ್ನು ಮುನ್ಸಿಪಲ್ ಕೌನ್ಸಿಲ್ನ ಸಮ್ಮತಿಯಿಂದ ಮಾಡಿರಲಿ ಅಥವಾ ಇಲ್ಲದೆ ಮಾಡಿರದಿರಲಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸುವ ಯುಕ್ತ ಕಾಲದೊಳಗೆ ಅಂಥ ಚಾವಣಿಯನ್ನು ಅಥವಾ ಗೋಡೆಯನ್ನು ತೆಗೆದುಹಾಕಲು ಅಗತ್ಯಪಡಿಸಬಹುದು.

**XXX XXX XXX**

**187. ಹೊಸ ಕಟ್ಟಡಗಳ ಬಗ್ಗೆ ತಿಳಿಸುವುದು.-** (1) ಯಾವುದೇ ಕಟ್ಟಡವನ್ನು ನಿರ್ಮಿಸುವ ಅಥವಾ ಈಗಿರುವ ಯಾವುದೇ ಕಟ್ಟಡಕ್ಕೆ ಹೊರಗೆ ಮರ್ಪಾಟು ಮಾಡುವ ಅಥವಾ ಅದಕ್ಕೆ ಸೇರಿಸುವ ಅಥವಾ ಯಾವ ಕಟ್ಟಡವನ್ನು ತೆಗೆದುಹಾಕಲು ಅಥವಾ ಯಾವ ಕಟ್ಟಡದ ನಿರ್ಮಾಣವನ್ನು ಹಿಂದಕ್ಕೆ ಸರಿಸಲು ಅಧಿಕಾರ ನೀಡಲಾಗಿದೆಯೋ ಆ ಯಾವುದೇ ಕಟ್ಟಡದ ಯಾವುದೇ ಮುಂಚಾಚಿರುವ ಭಾಗವನ್ನು ಅಥವಾ ಯಾವ ಕಟ್ಟಡದ ನಿರ್ಮಾಣಕ್ಕೆ ಅಥವಾ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ 179ನೇ ಪ್ರಕರಣದ ಮೂಲಕ ಅನುಮತಿಯನ್ನು ಕೊಡಲು ಮುನ್ಸಿಪಲ್ ಕೌನ್ಸಿಲ್ಗೆ 181ನೇ ಪ್ರಕರಣದ ಮೂಲಕ ಅಧಿಕಾರ ನೀಡಲಾಗಿದೆಯೋ ಆ ಕಟ್ಟಡವನ್ನು ನಿರ್ಮಿಸುವುದಕ್ಕೂ ಮೊದಲು ಅಥವಾ ಪುನರ್ ನಿರ್ಮಿಸುವುದನ್ನು ಪ್ರಾರಂಭಿಸುವುದಕ್ಕೂ ಮೊದಲು, ಹಾಗೆ ನಿರ್ಮಿಸಲು, ಮರ್ಪಾಟು ಮಾಡಲು, ಸೇರಿಸಲು ಅಥವಾ ಪುನರ್ ನಿರ್ಮಿಸಲು ಉದ್ದೇಶಿಸುವ ವ್ಯಕ್ತಿಯು, ಅದರ ಬಗ್ಗೆ ತಿಳಿವಳಿಕೆಯನ್ನು ಬರಹದಲ್ಲಿ ಮುನ್ಸಿಪಲ್ ಕೌನ್ಸಿಲ್ಗೆ ಕೊಡತಕ್ಕದ್ದು ಮತ್ತು ಅದೇ ಕಾಲದಲ್ಲಿ ಅಂಥ ಕಟ್ಟಡದ ತಳಪಾಯವನ್ನು ಮತ್ತು ಅತಿ ಕೆಳಗಿನ ನೆಲ ಅಂತಸ್ತಿನ ಮಟ್ಟಗಳನ್ನು, ಮುನ್ಸಿಪಲ್ ಕೌನ್ಸಿಲ್ಗೆ ತಿಳಿದಿರುವ ಯಾವುದೇ ಮಟ್ಟವನ್ನು ತಿಳಿಸಿ ಯಾವ ಮಟ್ಟಗಳಲ್ಲಿ ಹಾಕಲು ಪ್ರಸ್ತಾವಿಸಲಾಗಿದೆಯೋ ಆ ಮಟ್ಟಗಳನ್ನು ತೋರಿಸುವ ನಕ್ಷೆಯನ್ನು, ಮತ್ತು ಪ್ರಸ್ತಾವಿತ ಕಟ್ಟಡದ ಪರಿಮಿತಿಗಳು, ಉದ್ದಗಲ, ವಿನ್ಯಾಸ, ವಾಯು ಸಂಚಾರ, ಸಾಮಗ್ರಿಗಳ ಬಗ್ಗೆ ಬೈಲಾಗಳಲ್ಲಿ ಅಗತ್ಯಪಡಿಸಿದ ಅಥವಾ ಮುನ್ಸಿಪಲ್ ಕೌನ್ಸಿಲ್ ತಗಾದೆ ಮಾಡಿದ ಎಲ್ಲ ಮಾಹಿತಿಯನ್ನು ಮತ್ತು ಅದಕ್ಕೆ ಸಂಬಂಧಿಸಿದಂತೆ ಬಳಸಬೇಕಾದ ಚರಂಡಿಗಳು, ಗ್ರಾಮಸಾರ ಚರಂಡಿಗಳು, ಕಕ್ಕಸುಗಳು, ಶೌಚಗೃಹಗಳು ಮತ್ತು ರೊಚ್ಚುಗುಂಡಿಗಳು ಯಾವುದಾದರೂ ಇದ್ದರೆ ಅವುಗಳ ಉದ್ದೇಶಿತ ಸ್ಥಳ ಮತ್ತು ನಿರ್ಮಾಣದ ಬಗ್ಗೆ ಯಾವುದೇ ಈಗಿರುವ ಅಥವಾ ಯೋಜಿತ ಬೀದಿಗಳಿಗೆ ಸಂಬಂಧಪಟ್ಟಂತೆ ಕಟ್ಟಡದ ಸ್ಥಳವನ್ನು ಹಾಗೂ ಕಟ್ಟಡವನ್ನು ಯಾವ ಉದ್ದೇಶಕ್ಕಾಗಿ ಬಳಸಬೇಕಾಗಿದೆಯೋ ಆ ಉದ್ದೇಶದ ಬಗ್ಗೆ ಎಲ್ಲ ಮಾಹಿತಿಯನ್ನು ಒದಗಿಸತಕ್ಕದ್ದು.

**XXX XXX XXX**

(3) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಮತ್ತು ಬೈಲಾಗಳಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು ಮುನ್ಸಿಪಲ್ ಕೌನ್ಸಿಲ್,-

**XXX XXX XXX**

(ಡಿ) ಈ ಮುಂದೆ ಹೇಳಿರುವ ಸನ್ನಿವೇಶ/ ಸಂದರ್ಭಗಳಲ್ಲಿ, ಎಂದರೆ,-

(i) ಕೆಲಸವು ಅಂಥ ಕೆಲಸಕ್ಕಾಗಿ ಇರುವ ನಿವೇಶನದ ಬಳಕೆಯು ಅಥವಾ ನಿವೇಶನ ನಕ್ಷೆಯಲ್ಲಿ, ತಳ (ಕಟ್ಟು) ನಕ್ಷೆ, ಉನ್ನತಿ ನಕ್ಷೆಗಳು, ವಿಭಾಗಗಳುಅಥವಾ ತಪಸೀಲು ಪಟ್ಟಿಗಳಲ್ಲಿ ಒಳಗೊಂಡಿರುವ ಯಾವುದೇ ವಿವರವು ಯಾವುದೇ ಕಾನೂನಿನ ನಿರ್ದಿಷ್ಟ ನಿಬಂಧನೆಯನ್ನು ಅಥವಾ ಯಾವುದೇ ಕಾನೂನಿನ ಮೇರೆಗೆ ಮಾಡಿದ ಯಾವುದೇ ನಿರ್ದಿಷ್ಟ ಆದೇಶವನ್ನು, ನಿಯಮವನ್ನು, ಘೋಷಣೆಯನ್ನು ಅಥವಾ ಬೈಲಾವನ್ನು ಉಲ್ಲಂಘಿಸುವುದಾದರೆ;

(ii) ಅಂಥ ಅನುಮತಿಗಾಗಿ ಸಲ್ಲಿಸಿದ ಅರ್ಜಿಯು ವಿವರಗಳನ್ನು ಒಳಗೊಂಡಿರದಿದ್ದರೆ ಅಥವಾ ನಿಯಮಗಳ ಅಥವಾ ಬೈಲಾಗಳ ಮೇರೆಗೆ ಅಗತ್ಯಪಡಿಸಿದ ರೀತಿಯಲ್ಲಿ ತಯಾರಿಸಿರದಿದ್ದರೆ;

(iii) ಉಪ-ಪ್ರಕರಣ (1) ರಲ್ಲಿ ಹೇಳಿರುವ ಯಾವುದೇ ದಸ್ತಾವೇಜನ್ನು ನಿಯಮಗಳಲ್ಲಿ ಅಥವಾ ಬೈಲಾದಲ್ಲಿ ಅಗತ್ಯಪಡಿಸಿದಂತೆ ರುಜು ಮಾಡಿರದಿದ್ದರೆ;

(iv) ನಿಯಮಗಳ ಅಥವಾ ಬೈಲಾಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಅಗತ್ಯಪಡಿಸಿದ ಯಾವುದೇ ಮಾಹಿತಿಯನ್ನು ಅಥವಾ ದಸ್ತಾವೇಜುಗಳನ್ನು ಕ್ರಮಬದ್ಧವಾಗಿ ಒದಗಿಸಿರದಿದ್ದರೆ;

(v) 170ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಬೀದಿಗಳನ್ನು ಅಥವಾ ರಸ್ತೆಗಳನ್ನು ಮಾಡಿರದಿದ್ದರೆ;

(vi) ಪ್ರಸ್ತಾವಿತ ಕಟ್ಟಡದಿಂದ, ಸರ್ಕಾರದ ಅಥವಾ ಮುನ್ಸಿಪಾಲಿಟಿ ಭೂಮಿಯ ಮೇಲೆ ಒತ್ತುವರಿಯಾಗುವುದಿದ್ದರೆ;

(vii) ಅಂಥ ಕಟ್ಟಡದ ನಿವೇಶನವು ಬೀದಿಗೆ ಅಥವಾ ಪ್ರಸ್ತಾವಿತ ಬೀದಿಗೆ ಲಗತ್ತಾಗಿರದಿದ್ದರೆ ಮತ್ತು ಅಂಥ ಯಾವುದೇ ಬೀದಿಯಿಂದ ಅಂಥ ನಿವೇಶನಕ್ಕೆ ಸೇರಿರುವ ಮತ್ತು ಯಾವುದೇ ಭಾಗದಲ್ಲಿ ಹನ್ನೆರಡು ಅಡಿಗಳಿಗಿಂತ ಕಡಿಮೆಯಿಲ್ಲದ ಹಾದಿಯ ಅಥವಾ ಕಾಲು ದಾರಿಯ ಮೂಲಕ ಅಂಥ ಕಟ್ಟಡಕ್ಕೆ ಪ್ರವೇಶಾವಕಾಶವಿರದಿದ್ದರೆ;

(viii) ಹಾಗೆ ಅರ್ಜಿ ಸಲ್ಲಿಸುವ ವ್ಯಕ್ತಿಗೆ, ಸಂಬಂಧಪಟ್ಟ ಭೂಮಿ ಮೇಲೆ ಯಾವ ಹಕ್ಕೂ ಇಲ್ಲದಿದ್ದರೆ ಅಥವಾ ನಿರ್ಮಿಸುವ, ಮಾರ್ಪಾಟು ಮಾಡುವ, ಸೇರಿಸುವ ಅಥವಾ ಪುನರ್ ನಿರ್ಮಿಸುವ ಹಕ್ಕು ಇಲ್ಲದಿದ್ದರೆ;

(ix) ಯಾವ ಭೂಮಿಯ ಮೇಲೆ ಯಾವುದೇ ಕಟ್ಟಡವನ್ನು ನಿರ್ಮಿಸಲು ಪ್ರಸ್ತಾವಿಸಲಾಗಿದೆಯೋ ಆ ಭೂಮಿಯು ಅಥವಾ ಯಾವ ಭೂಮಿಯ ಮೇಲೆ ಇರುವ ಕಟ್ಟಡವನ್ನು ಮಾರ್ಪಾಟು ಮಾಡುವುದಕ್ಕೆ, ಅದಕ್ಕೆ ಸೇರಿಸುವುದಕ್ಕೆ ಅಥವಾ ಮರು ನಿರ್ಮಾಣ ಮಾಡುವುದಕ್ಕೆ ಪ್ರಸ್ತಾವಿಸಲಾಗಿದೆಯೋ ಆ ಯಾವುದೇ ಭೂಮಿಯು ಅಥವಾ ಕಟ್ಟಡವು ಮುನ್ಸಿಪಲ್ ಕೌನ್ಸಿಲ್‌ಗೆ ಅಗತ್ಯವಾಗಿದ್ದರೆ ಮತ್ತು ಅದನ್ನು ಆರ್ಜಿಸಲು ಕ್ರಮವನ್ನು ತೆಗೆದುಕೊಳ್ಳುತ್ತಿದ್ದರೆ:

- ಒದಗಿಸಿದ ನಕ್ಷೆ ಮತ್ತು ಮಾಹಿತಿಗನುಸಾರವಾಗಿ ನಿರ್ಮಿಸಲು, ಬದಲಾಯಿಸಲು, ಸೇರಿಸಲು ಅಥವಾ ಪುನರ್ ನಿರ್ಮಿಸಲು ಅನುಮತಿಯನ್ನು ನಿರಾಕರಿಸಬಹುದು. ಅಂಥ ನಿರಾಕರಣೆಗೆ ಕಾರಣಗಳನ್ನು ಆದೇಶದಲ್ಲಿ ನಿರೂಪಿಸತಕ್ಕದ್ದು:

ಪರಂತು, (ಸಿ) ಖಂಡದ ಮೇರೆಗಿನ ನಿರ್ದೇಶನವು, ಆ ನಿರ್ದೇಶನವನ್ನು ಕೊಟ್ಟ ದಿನಾಂಕದಿಂದ ಒಂದು ವರ್ಷದ ತರುವಾಯ ಜಾರಿಯಲ್ಲಿರತಕ್ಕದ್ದಲ್ಲ.

**XXX XXX XXX**

**208. ಕೆಲವು ಮುಂಚಾಚುವಿಕೆಗಳಿಗೆ ಅನುಮತಿ ಅಗತ್ಯ.-** (1) ಮುನ್ಸಿಪಲ್ ಕೌನ್ಸಿಲ್, ಕಟ್ಟಡಗಳ ಒಡೆಯರಿಗೆ ಅಥವಾ ಅಧಿಭೋಗದಾರರಿಗೆ ಸರ್ವಜನಿಕ ಬೀದಿಗಳಲ್ಲಿರುವ ಕಟ್ಟಡಗಳ ಯಾವುದೇ ಮೇಲ್ಮಹಡಿಯಿಂದ, ಮುನ್ಸಿಪಲ್ ಕೌನ್ಸಿಲ್ ಕಾಲಕಾಲಕ್ಕೆ ಬೈಲಾಗಳಲ್ಲಿ ನಿಗದಿಪಡಿಸಬಹುದಾದಂತೆ ಬೀದಿಯ ಮೇಲ್ಮಟ್ಟದಿಂದ ಅಂಥ ನಿಗದಿತ ಎತ್ತರದಲ್ಲಿ ಮತ್ತು ಮೇಲುಪಾಯದ ಅಥವಾ ತಳಮಟ್ಟದ ಗೋಡೆಯ ರೇಖೆಯ ಆಚೆ ನಾಲ್ಕು ಅಡಿಗಳಿಗೆ ಮೀರದಷ್ಟು ಮುಂದಕ್ಕೆ ಚಾಚಿರುವಂತೆ ತೆರೆದ ವರಾಂಡಗಳನ್ನು, ಬಾಲ್ಕನಿಗಳನ್ನು ಅಥವಾ ಕೊಠಡಿಗಳನ್ನು ನರ್ಮಿಸಲು ಬರಹದಲ್ಲಿ ಅನುಮತಿಯನ್ನು ಕೊಡಬಹುದು ಮತ್ತು ಚಾವಣಿಗಳು, ಸೂರುಗಳು, ಮಳೆ ಹಲಗೆ, ಅಂಗಡಿ ಫಲಕಗಳನ್ನು ಮತ್ತು ಅಂಥವುಗಳನ್ನು ಎಷ್ಟರವರೆಗೆ ಮತ್ತು ಯಾವ ಷರತ್ತುಗಳಿಗೊಳಪಟ್ಟು ಅಂಥ ಬೀದಿಗಳಲ್ಲಿ ಮುಂಚಾಚಲು ಅವಕಾಶ ಕೊಡಬಹುದೆಂಬುದನ್ನು ನಿಯಮಿಸಬಹುದು.

**XXX XXX XXX**

(3) ಮುನ್ಸಿಪಲ್ ಕೌನ್ಸಿಲ್, ಅಂಥ ಕಟ್ಟಡದ ನಿವೇಶನವು ಮುನ್ಸಿಪಲ್ ಏರಿಯಾದ ಭಾಗವಾಗುವುದಕ್ಕೆ ಮುಂಚೆಯೇ ಆಗಲಿ ಅಥವಾ ಅದಕ್ಕೆ ತರುವಾಯವೇ ಆಗಲಿ ನರ್ಮಿಸಿದಂಥ, ಅಂಥ ಕಟ್ಟಡದ ಎದುರಿಗೆ ಅಥವಾ ಮುಂಭಾಗದಲ್ಲಿ ನರ್ಮಿಸಲಾದ ಅಥವಾ ಇಡಲಾದ; ಮತ್ತು

(ಎ) ಸಾರ್ವಜನಿಕ ಬೀದಿಯ ಸುರಕ್ಷತೆ ಮತ್ತು ಸುಗಮ ಸಂಚಾರಕ್ಕೆ ಅಡ್ಡಿಯಾಗುವ ಹಾಗೆ, ಯಾವುದೇ ಅಂಥ ಬೀದಿಯ ಮೇಲೆ ಬಾಗಿರುವ ಅಥವಾ ಅದರೊಳಗೆ ಮುಂದಕ್ಕೆ ಚಾಚಿರುವ ಅಥವಾ ಯಾವುದೇ ರೀತಿಯಲ್ಲಿ ಮುಂಚಾಚಿರುವಂಥ ಅಥವಾ ಒತ್ತುವರಿಯಾಗಿರುವಂಥ; ಅಥವಾ

(ಬಿ) ಮೇಲ್ಕಾಲುವೆ, ಚರಂಡಿ ಅಥವಾ ಗ್ರಾಮಸಾರ ಚರಂಡಿಗೆ ಅಥವಾ ಅದರ ಸರಿಯಾದ ಕರ್ಯ ನರ್ವಹಣೆಗೆ ಅಡ್ಡಿಯಾಗುವ ಹಾಗೆ ಅಥವಾ ನಡುವೆ ಬರುವ ಹಾಗೆ ಅಂಥ ಬೀದಿಯಲ್ಲಿರುವ ಅಂಥ ಮುಚ್ಚಿರದ ಮೇಲ್ಕಾಲುವೆಯೊಳಕ್ಕೆ, ಚರಂಡಿಯೊಳಕ್ಕೆ ಅಥವಾ ಗ್ರಾಮಸಾರ ಚರಂಡಿಯೊಳಕ್ಕೆ ಅಥವಾ ಅದರ ಮೇಲೆ ಮುಂಚಾಚುವ ಅಥವಾ ಒತ್ತುವರಿಯಾಗುವ ಹಾಗೆ ಮುಂಚಾಚುವುದನ್ನು, ಒತ್ತುವರಿಯನ್ನು ಅಥವಾ ಅಡ್ಡಿಯನ್ನು ತೆಗೆದು ಹಾಕಲು ಅಥವಾ ಮರ್ಪಾಟು ಮಾಡಲು ಯಾವುದೇ ಕಟ್ಟಡದ ಒಡೆಯನನ್ನು ಅಥವಾ ಅಧಿಭೋಗದಾರನನ್ನು ಬರಹದಲ್ಲಿ ನೋಟೀಸಿನ ಮೂಲಕ ಅಗತ್ಯಪಡಿಸಬಹುದು:

ಪರಂತು, ಮುನ್ಸಿಪಲ್ ಕೌನ್ಸಿಲ್ ಅಂಥ ಸ್ಥಳವು ಮುನ್ಸಿಪಲ್ ಏರಿಯಾದ ಭಾಗವಾದ ದಿನಾಂಕಕ್ಕೆ ಮುಂಚೆ ಅಥವಾ ಅಂಥ ದಿನಾಂಕದ ತರವಾಯ ಮುನ್ಸಿಪಲ್ ಕೌನ್ಸಿಲ್ ನಿಂದ ಬರಹದಲ್ಲಿ ಅನುಮತಿ ಪಡೆದು ಯಾವುದೇ ಸ್ಥಳದಲ್ಲಿ ಹಾಗೆ ಮುಂಚಾಚಿರುವುದನ್ನು, ಒತ್ತುವರಿಯನ್ನು ಅಥವಾ ಅಡ್ಡಿಯನ್ನು ಮಾಡಿದ್ದರೆ, ಅದನ್ನು ತೆಗೆದುಹಾಕಿರುವುದರಿಂದ ಅಥವಾ ಮರ್ಪಾಟು ಮಾಡಿರುವುದರಿಂದ ಹಾನಿಗೀಡಾದ ಪ್ರತಿಯೊಬ್ಬ ವ್ಯಕ್ತಿಗೆ ಸಮಂಜಸ ಪರಿಹಾರವನ್ನು ಕೊಡತಕ್ಕದ್ದು, ಮತ್ತು ಅಂಥ ನಷ್ಟ ಪರಿಹಾರದ ಮೊಬಲಗಿಗೆ ಸಂಬಂಧಿಸಿದಂತೆ ಯಾವುದೇ ವಿವಾದವು ಉದ್ಭವಿಸಿದರೆ, ಹಾನಿಯನ್ನು 268ನೇ ಪ್ರಕರಣದಲ್ಲಿ ಹೇಳಿರುವ ರೀತಿಯಲ್ಲಿ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು.

**XXX** **XXX** **XXX**

**256. ಲೈಸೆನ್ಸ್ ಪಡೆಯದೆ ಕೆಲವು ಉದ್ದೇಶಗಳಿಗಾಗಿ ಆವರಣವನ್ನು ಬಳಸತಕ್ಕದ್ದಲ್ಲ.:-** (1) ಯಾರೇ ವ್ಯಕ್ತಿಯು, ಈ ಬಗ್ಗೆ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಮಂಜೂರು ಮಾಡಿದ ಲೈಸೆನ್ಸ್ ಇಲ್ಲದೆ ಅಥವಾ ಅದರ ನಿಬಂಧನೆಗಳಿಗನುಗುಣವಾಗಲ್ಲದೆ ಅನ್ಯಥಾ ಈ ಕೆಳಕಂಡ ಯಾವುದೇ ಉದ್ದೇಶಗಳಿಗಾಗಿ, ಎಂದರೆ:-

(ಎ) XIIIನೇ ಅನುಸೂಚಿಯ 1ನೇ ಭಾಗದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಉದ್ದೇಶಕ್ಕಾಗಿ;

(ಬಿ) ಯಾವ ಉದ್ದೇಶದಿಂದಾಗಿ ಪ್ರಾಣ, ಆರೋಗ್ಯ ಅಥವಾ ಸ್ವತ್ತಿಗೆ ಅಪಾಯಕಾರಿ ಅಥವಾ ಉಪದ್ರವವನ್ನುಂಟು ಮಾಡುವ ಸಂಭವವಿದೆಯೆಂದು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಅಭಿಪ್ರಾಯಪಡುವರೋ ಆ ಯಾವುದೇ ಉದ್ದೇಶಕ್ಕಾಗಿ;

(ಸಿ) ಕುದುರೆಗಳ, ಜಾನುವಾರುಗಳ ಅಥವಾ ಇತರ ಚತುಷ್ಪಾದ ಪ್ರಾಣಿಗಳ ಅಥವಾ ಪಕ್ಷಿಗಳ ಸಾಗಣೆಗಾಗಿ, ಮಾರಾಟಕ್ಕಾಗಿ ಅಥವಾ ಅವುಗಳನ್ನು ಬಾಡಿಗೆಗೆ ಕೊಡುವ ಅಥವಾ ಅವುಗಳ ಉತ್ಪನ್ನದ ಮಾರಾಟದ ಉದ್ದೇಶಕ್ಕಾಗಿ; ಅಥವಾ

(ಡಿ) ಆ ಯಾವುದೇ ವಸ್ತುವನ್ನು ಮನೆ ಬಳಕೆಗಲ್ಲದೆ ಫಿIIIನೇ ಅನುಸೂಚಿಯ IIನೇ ಭಾಗದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ವಸ್ತುವನ್ನು ದಾಸ್ತಾನು ಮಾಡುವ ಉದ್ದೇಶಕ್ಕಾಗಿ:-ಯಾವುದೇ ಆವರಣವನ್ನು ಬಳಸತಕ್ಕದ್ದಲ್ಲ:

ಪರಂತು, ಮುನ್ಸಿಪಲ್ ಕೌನ್ಸಿಲ್, ಯಾವ ಆವರಣದಲ್ಲಿ ಮಾರಾಟಕ್ಕಾಗಿ ದಾಸ್ತಾನು ಮಾಡಿದ ವಸ್ತುಗಳ ಒಟ್ಟು ಪ್ರಮಾಣವು, ಅಂಥ ಯಾವುವೇ ವಸ್ತುಗಳ ಸಂಬಂಧದಲ್ಲಿ ಬೈಲಾಗಳ ಮೂಲಕ ಗೊತ್ತುಪಡಿಸಬಹುದಾದಂಥ ಪ್ರಮಾಣವನ್ನು ಮೀರದಿದ್ದರೆ, ಆ ಯಾವುದೇ ಆವರಣಕ್ಕೆ (ಡಿ) ಖಂಡದ ಪುರ_ನೆಯಾಗದಂತೆ ವಿನಾಯಿತಿಗೊಳಿಸತಕ್ಕದ್ದೆಂದು ಘೋಷಿಸಬಹುದು:

ಮತ್ತು ಪರಂತು, ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಅಧಿನಿಯಮ, 2006 (2006ರ ಕೇಂದ್ರ ಅಧಿನಿಯಮ 27)ರ ಅಡಿಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳು ನೋಂದಾಯಿಸಿರುವ ಎಲ್ಲ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳಿಗೆ ಮತ್ತು ಭಾರತ ರ್ಸ್ಕಾರದ ಕೈಗಾರಿಕಾ ನೆರವು ಸಚಿವಾಲಯದಲ್ಲಿ, ಕೈಗಾರಿಕಾ ನೀತಿ ಮತ್ತು ಉತ್ತೇಜನಾ ಇಲಾಖೆಯಲ್ಲಿ ಕೈಗಾರಿಕಾ ಉದ್ಯಮಿಗಳ ಮೆಮೊರಾಂಡಂನ್ನು ಮತ್ತು ಕೈಗಾರಿಕಾ ಲೈಸೆನ್ಸ್‌ಗಾಗಿ ರ್ಜಿಯನ್ನು ಸಲ್ಲಿಸಿರುವ ಬೃಹತ್ ಕೈಗಾರಿಕೆಗಳಿಗೆ ವ್ಯಾಪಾರ ಲೈಸೆನ್ಸ್ ಪಡೆದುಕೊಳ್ಳುವುದಕ್ಕೆ ವಿನಾಯಿತಿಯನ್ನು ನೀಡಲಾಗಿದೆ

(2) ಸರ್ಕಾರವು, ಮುನ್ಸಿಪಲ್ ಏರಿಯಾದ ಎಲ್ಲೆಗಳ ಎರಡು ಮೈಲಿಗಳ ಅಂತರದೊಳಗೆ ಇರುವ ಯಾವುದೇ ಆವರಣವನ್ನು ಸಂಬಂಧಪಟ್ಟ 1[ಮುನ್ಸಿಪಲ್ ಏರಿಯಾ]1 ದ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನಿಂದ ಲೈಸೆನ್ಸ್ ಪಡೆಯದೆ ಮತ್ತು ಅಂಥ ಲೈಸೆನ್ಸ್ ನಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗನುಸಾರವಾಗಲ್ಲದೆ ಫಿIII ನೇ ಅನುಸೂಚಿಯ I ನೇ ಹಾಗೂ II ನೇ ಭಾಗದಲ್ಲಿ ನಮೂದಿಸಿರುವ ಯಾವುದೇ ಒಂದು ಅಥವಾ ಹೆಚ್ಚಿನ ಉದ್ದೇಶಗಳಿಗಾಗಿ ಬಳಸತಕ್ಕದ್ದಲ್ಲವೆಂದು ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು ಮತ್ತು (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಮುನ್ಸಿಪಲ್ ಏರಿಯಾ ದೊಳಗಿನ ಯಾವುದೇ ಆವರಣಕ್ಕೆ ಅನ್ವಯವಾಗುವ ಈ ಅಧಿನಿಯಮವು ಮತ್ತು ಅದರ ಮೇರೆಗಿನ ನಿಯಮಗಳು ಹಾಗೂ ಬೈಲಾಗಳ ಉಪಬಂಧಗಳು ಮುನ್ಸಿಪಲ್ ಏರಿಯಾ ದ ಹೊರಗಿರುವ ಆವರಣಕ್ಕೂ ಅನ್ವಯವಾಗತಕ್ಕದ್ದು:

ಪರಂತು, ಅಂಥ ಯಾವುದೇ ಅಧಿಸೂಚನೆಯು ರ್ಸ್ಕಾರೀ ರಾಜಪತ್ರದಲ್ಲಿ ಅದನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿವಸಗಳು ಮುಕ್ತಾಯವಾಗುವವರೆಗೆ, ಜಾರಿಗೆ ಬರತಕ್ಕದ್ದಲ್ಲ.

(3) ಗಿರಣಿಗಳಿಗಾಗಿ ಅಥವಾ ಕಬ್ಬಿಣ ಇಡುವ ಅಂಗಳಗಳಾಗಿ ಅಥವಾ ಅಂಥದೇ ಉದ್ದೇಶಗಳಿಗಾಗಿ, ಆವರಣಗಳನ್ನು ಬಳಸುವುದಕ್ಕಾಗಿ ಈ ಪ್ರಕರಣದ ಮೇರೆಗೆ ಮಂಜೂರು ಮಾಡಿದ ಲೈಸೆನ್ಸ್ ನ

ನಿಬಂಧನೆಗಳನ್ನು ಗೊತ್ತುಪಡಿಸುವಾಗ, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಸಮಂಜಸವೆಂದು ಅವರು ಭಾವಿಸಿದರೆ, ಲೈಸೆನ್ಸ್ ಪಡೆದವನನ್ನು ಭಾರ ಹೇರುವ ಮತ್ತು ಭಾರ ಇಳಿಸುವ ಉದ್ದೇಶಗಳಿಗಾಗಿ ವಾಹನಗಳಿಗೆ ಆವರಣದೊಳಗೆ ಜಾಗವನ್ನು ಅಥವಾ ದಾರಿಯನ್ನು ಒದಗಿಸಲು ಅಗತ್ಯಪಡಿಸಬಹುದು.

(4) ಮುನ್ಸಿಪಲ್ ಕೌನ್ಸಿಲ್ (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸನ್ನು ನೀಡಿರುವ ಆವರಣಗಳಿಗೆ ಸಂಬಂಧಿಸಿದಂತೆ, ಸಂದಾಯ ಮಾಡಬೇಕಾದ ಫೀಜುಗಳ ಪ್ರಮಾಣವನ್ನು ನಿಗದಿಪಡಿಸತಕ್ಕದ್ದು:

ಪರಂತು, ಅಂಥ ಯಾವುದೇ ಫೀಜು ವರ್ಷಕ್ಕೆ ಐದು ನೂರು ರೂಪಾಯಿಗಳನ್ನು ಮೀರತಕ್ಕದ್ದಲ್ಲ.

(6) ಉಪಪ್ರಕರಣ (1) ರ ಅಥವಾ (2) ರ ಅಥವಾ (3) ರ ಅಥವಾ 324ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ (iv)ನೇ ಉಪಖಂಡದ ಮೇರೆಗೆ ರಚಿಸಿದ ಯಾವುದೇ ಬೈಲಾವನ್ನು ಉಲ್ಲಂಘಿಸಿ ಯಾವುವೇ ಆವರಣಗಳನ್ನು ಉಪಯೋಗಿಸುವ ಯಾರೇ ಆಗಲಿ ಎರಡುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಅಪರಾಧ ನಿರ್ಣಯದ ದಿನಾಂಕದ ತರುವಾಯವೂ ಅಂಥ ಉಲ್ಲಂಘನೆಯು ಮುಂದುವರಿದರೆ ಪ್ರತಿದಿನಕ್ಕೆ ನಲವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(7) ಉಪಪ್ರಕರಣ (1) ರ (ಎ) ಅಥವಾ (ಬಿ) ಖಂಡದಲ್ಲಿ ಹೇಳಿರುವ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸಿದ ಯಾವುದೇ ಆವರಣಕ್ಕೆ ಸಂಬಂಧಿಸಿದಂತೆ, ಈ ಪ್ರಕರಣದ ಮೇರೆಗೆ ಆದ ಅಪರಾಧ ನಿರ್ಣಯದ ತರುವಾಯ ಮ್ಯಾಜಿಸ್ಟ್ರೇಟ್ ನು, ಮುನ್ಸಿಪಲ್ ಕೌನ್ಸಿಲ್ ರ್ಜಿ ಸಲ್ಲಿಸಿದ ಮೇಲೆ, ಆದರೆ ಅನ್ಯಥಾ ಅಲ್ಲ, ಅಂಥ ಆವರಣವನ್ನು ಮುಚ್ಚಬೇಕೆಂದು ಆದೇಶಿಸತಕ್ಕದ್ದು ಮತ್ತು ಆ ತರುವಾಯ (1)ನೇ ಉಪಪ್ರಕರಣದ (ಎ) ಅಥವಾ (ಬಿ) ಖಂಡದಲ್ಲಿ ಹೇಳಿರುವ ಯಾವುದೇ ಉದ್ದೇಶಕ್ಕಾಗಿ ಅಂಥ ಆವರಣಗಳನ್ನು ಉಪಯೋಗಿಸಿಕೊಳ್ಳುವುದನ್ನು ತಡೆಗಟ್ಟಲು ವ್ಯಕ್ತಿಗಳನ್ನು ನೇಮಕ ಮಾಡತಕ್ಕದ್ದು ಅಥವಾ ಇತರ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**XXX XXX XXX**

**324. ಬೈಲಾಗಳ ರಚನಾಧಿಕಾರ.-** (1) ಈ ಅಧಿನಿಯಮಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೊಳಪಟ್ಟು ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್, ಕಾಲಕಾಲಕ್ಕೆ,-

**XXX XXX XXX**

(ಸಿಸಿ) ಮೋಜಿಣಿದಾರರ, ಅಥವಾ 187ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಿದ ನಕ್ಷೆಗಳನ್ನು ತಯಾರು ಮಾಡಬೇಕಾದಂಥ ವ್ಯಕ್ತಿಗಳ ಅಥವಾ ಕೊಳಾಯಿಗಾರರ ರ್ವ್ತೆಗಳನ್ನು ನಿಯಮಿಸುವುದಕ್ಕಾಗಿ; ಮೋಜಿಣಿದಾರರಾಗಿ, ಅಥವಾ ಕೊಳಾಯಿಗಾರರಾಗಿ, ಅಥವಾ ನೀರು ಸರಬರಾಜು ಮಾಡುವ ಕಂಟ್ರಾಕ್ಟರ್ ಗಳಾಗಬೇಕಾದ ವ್ಯಕ್ತಿಗಳಿಗೆ ಲೈಸೆನ್ಸ್ ನ್ನು ಕೊಡುವುದು ಮತ್ತು ಅಂಥ ಲೈಸೆನ್ಸ್ ಗಳಿಗಾಗಿ ವಿಧಿಸಬೇಕಾದ ಫೀಜುಗಳನ್ನು ನಿಗದಿಪಡಿಸುವುದಕ್ಕಾಗಿ ಮತ್ತು ಅಂಥ ಲೈಸೆನ್ಸ್ ಗಳ ಉಪಬಂಧಗಳನ್ನು ಮರ್ಪ್ಾಟು ಮಾಡಲು ಅಥವಾ ರದ್ದಿಯಾತಿಗಾಗಿ ಮತ್ತು ಲೈಸೆನ್ಸ್ ಪಡೆದ ಕೊಳಾಯಿಗಾರರು ಅಥವಾ ನೀರು ಸರಬರಾಜು ಮಾಡುವ ಕಂಟ್ರಾಕ್ಟರ್ ಗಳಿಂದಲ್ಲದೆ ಬೇರೆಯವರು ನೀರು ಅಥವಾ ಚರಂಡಿ ವ್ಯವಸ್ಥೆ ಕೊಳವೆಗಳನ್ನು, ಗೃಹ ಸಂರ್ಕಗಳಿಗೆ ಸಂಬಂಧಿಸಿದಂತೆ ಮಾಡಬೇಕಾದ ಯಾವುವೇ ಬದಲಾವಣೆಗಳನ್ನು ಅಥವಾ ದುರಸ್ತಿಗಳನ್ನು ಅಥವಾ ಜೋಡಣೆಗಳನ್ನು ನರ್ವಹಿಸುವುದಕ್ಕಾಗಿ ಮತ್ತು ಮಾಡುವುದನ್ನು ನಿಷೇಧಿಸುವುದು; ಲೈಸೆನ್ಸ್ ಪಡೆದ ಕೊಳಾಯಿಗಾರರು ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಕಂಟ್ರಾಕ್ಟರ್ ಗಳ ಮೇಲೆ ಸಾಕಷ್ಟು ನಿಯಂತ್ರಣವನ್ನು ಚಲಾಯಿಸುವುದಕ್ಕೆ ಉಪಬಂಧಿಸುವುದಕ್ಕಾಗಿ; ಅವರು ಮಾಡಿದ ಎಲ್ಲಾ ಕಾಮಗಾರಿಗಳನ್ನು ಪರಿಶೀಲಿಸುವುದು ಮತ್ತು ಲೈಸೆನ್ಸ್ ಪಡೆದ ಕೊಳಾಯಿಗಾರರು ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಮಾಡುವ ಕಂಟ್ರಾಕ್ಟರ್ ದಾರರು ಮಾಡಿದ ಕೆಲಸದ ಗುಣಮಟ್ಟ, ಉಪಯೋಗಿಸಿದ ಸಾಮಗ್ರಿ, ಕೆಲಸದ ನರ್ವಹಣೆಯಲ್ಲಿನ ವಿಳಂಬ, ಮತ್ತು ಮಾಡಿದ ವೆಚ್ಚಗಳು, ಇವುಗಳ ಬಗ್ಗೆ ಮನೆಗಳ ಒಡೆಯರು ಅಥವಾ ಸ್ವಾಧೀನದಾರರು ಮಾಡಿದ ದೂರುಗಳನ್ನು ವಿಚಾರಿಸುವುದಕ್ಕಾಗಿ ಮತ್ತು ವಿಲೆ ಮಾಡುವುದಕ್ಕಾಗಿ;

**XXX XXX XXX**

(ಜಡ್) 170ನೇ ಮತ್ತು 187ನೇ ಪ್ರಕರಣಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಗೆ ಅಗತ್ಯವಾಗುವ ಮತ್ತು ಮಾಹಿತಿ ಮತ್ತು ನಕ್ಷೆಯನ್ನು ನಿರ್ಧರಿಸುವುದು;

**XXX XXX XXX**

**ತಪಶೀಲು ಪಟ್ಟಿ ಪತ್ರ**

**(ಇಲ್ಲಿ ಕರಸ್ಥ ಜಪ್ತಿ ಮಾಡಿದ ಸ್ವತ್ತಿನ ವಿವರಗಳನ್ನು ನಮೂದಿಸಿ)**

**ಅನುಸೂಚಿ- XIII**

**(ಪ್ರಕರಣ 256)**

**ಭಾಗ-I**

ಲೈಸೆನ್ಸ್ ಇಲ್ಲದೆ ಯಾವ ಉದ್ದೇಶಗಳಿಗಾಗಿ ಆವರಣಗಳನ್ನು ಉಪಯೋಗಿಸತಕ್ಕದ್ದಲ್ಲವೋ ಆ ಉದ್ದೇಶಗಳು ಈ ಕೆಳಕಂಡ ಯಾವುವೇ ಕಸಬುಗಳನ್ನು ಅಥವಾ ಆ ಕಸಬುಗಳಿಗೆ ಸಂಬಂಧಿಸಿದ ಕರ್ರ್ಯಾಚರಣೆಗಳನ್ನು ನಡೆಸಲಾಗುವುದೋ ಆ ಉದ್ದೇಶಗಳು:-

1. ರೊಟ್ಟಿ ಸುಡುವುದು (ಬೇಕಿಂಗ್).
2. ಚಲನಚಿತ್ರ ಫಿಲಂಗಳನ್ನು ತೆಗೆಯುವುದು.
3. ಯಾವುದೇ ವಿಧಾನದಿಂದ ಚಲನಚಿತ್ರ ಫಿಲಂಗಳನ್ನು ಸಂಸ್ಕರಿಸುವುದು.
4. ಮೆಣಸಿನಕಾಯಿ ಅಥವಾ ಮಸಾಲೆ ಅಥವಾ ಕಾಳು ಅಥವಾ ಬೀಜಗಳನ್ನು ಯಾಂತ್ರಿಕ ಸಾಧನದ ಮೂಲಕ ಅರೆಯುವುದು.
5. ನೀಲಿ ಅಥವಾ ಇತರ ಬಣ್ಣಗಳಲ್ಲಿ ಬಟ್ಟೆ ನೂಲು ಅಥವಾ ರ್ಮಕ್ಕೆ ಬಣ್ಣ ಹಾಕುವುದು ಅಥವಾ ಮುದ್ರಿಸುವುದು.
6. ಬಟ್ಟೆ ಅಥವಾ ನೂಲನ್ನು ಬ್ಲೀಚ್ ಮಾಡುವುದು.
7. ಭೋಜನಗೃಹ ಅಥವಾ ಆಹಾರ ಸರಬರಾಜಿನ ವ್ಯವಸ್ಥಾಪನೆಯನ್ನು ಇಡುವುದು.
8. ಧಾನ್ಯವನ್ನು ಹುರಿಯುವುದು.
9. ನೆಲಗಡಲೆ ಬೀಜಗಳು, ಹುಣಸೆಬೀಜಗಳು ಅಥವಾ ಯಾವುದೇ ಇತರ ಬೀಜಗಳನ್ನು ಹುರಿಯುವುದು.
10. ಹೇರ್ ಡ್ರೆಸಿಂಗ್ ಸಲೂನ್ ಅಥವಾ ಕ್ಷೌರದ ಅಂಗಡಿಯನ್ನು ಇಡುವುದು.
11. ಕಚ್ಚಾ ಅಥವಾ ಒಣಗಿದ ತೊಗಲು ಅಥವಾ ರ್ಮವನ್ನು ಹದ ಮಾಡುವುದು, ಒತ್ತುವುದು (ಪ್ರೆಸ್ಸಿಂಗ್)ಪ್ಯಾಕ್ ಮಾಡುವುದು.
12. ಲಾಂಡ್ರಿ ಅಂಗಡಿ ಇಡುವುದು.
13. ಯಂತ್ರ ಸಾಧನದ ಮೂಲಕ ರ್ಮದ ಸರಕುಗಳನ್ನು ತಯಾರಿಸುವುದು.
14. ಕಲ್ಲಚ್ಚು ಮುದ್ರಣಾಲಯವನ್ನು ಇಡುವುದು.
15. ವಸತಿ ಗೃಹವನ್ನು ಇಡುವುದು.
16. ಲೋಹವನ್ನು ಎರಕ ಹೊಯ್ಯುವುದು.
17. ಬೆಲೆ ಬಾಳುವ ಲೋಹಗ ಶುದ್ದೀಕರಿಸುವುದು ಅಥವಾ ಎಂಬ್ರೈಡರಿಗಳಿಂದ ಸೂಕ್ಷ್ಮವಾಗಿಅವುಗಳನ್ನು ಹೊರತೆಗೆಯುವುದು.
18. ಮುದ್ರಣಾಲಯವನ್ನು ಇಡುವುದು.
19. ರೇಷ್ಮೆಗೂಡಿನಿಂದ ರೇಷ್ಮೆ ನೂಲು ತೆಗೆಯುವುದು.
20. ಭೋಜನ ಗೃಹವಾಗಿ ಈಗಾಗಲೇ ಲೈಸೆನ್ಸ್ ಪಡೆದ ಆವರಣಗಳ ಹೊರತಾಗಿ – ಇತರ ಸ್ಥಳಗಳಲ್ಲಿ ಮಿಠಾಯಿ ಅಂಗಡಿಯನ್ನು ಇಡುವುದು.
21. (i) ಆಟೋ, ಕಾರು ಅಥವಾ ಆಟೋಸೈಕಲ್ ರ್ಿವಿಸಿಂಗ್ ಅಥವಾ ರಿಪೇರಿ ಮಾಡುವುದು.
    (ii) ಕಮ್ಮಾರಿಕೆ.
    (iii) ತಾಮ್ರ ಕೆಲಸ ಮಾಡುವುದು.
    (iv) ವಿದ್ಯುತ್ ಲೇಪನ ಮಾಡುವುದು.
    (v) ಗ್ಲಾಸ್ ಬಿವಲ್ಲಿಂಗ್ ಮಾಡುವುದು.
    (vi) ಗಾಜು ಕತ್ತರಿಸುವುದು.

(vii) ಗಾಜು ನಯಗೊಳಿಸುವುದು.

(viii) ಅಕ್ಕಸಾಲಿ ಕೆಲಸ.

(xi) ಅಮೃತಶಿಲೆ ಕತ್ತರಿಸುವುದು, ಅರೆಯುವುದು, ಸಜ್ಜು ಮಾಡುವುದು ಅಥವಾ ನಯಗೊಳಿಸುವುದು.

(x) (ಫೆರಸ್ ಅಥವಾ ನಾನ್ ಫೆರಸ್ ಅಥವಾ ಆಂಟಿಮನಿ, ಆದರೆ ಬೆಲೆ ಬಾಳುವ ಲೋಹವನ್ನು ಹೊರತುಪಡಿಸಿ) ಲೋಹವನ್ನು ಕತ್ತರಿಸುವುದು, ಸುತ್ತಿಗೆಯಿಂದ ಬಡಿಯುವುದು, ಕೊರೆ ಕಾಯಿಸುವ ಮೂಲಕ ಅಥವಾ ಇತರ ಯಾವುದೇ ಕ್ರಮದ ಮೂಲಕ ಲೋಹವನ್ನು ಸಂಸ್ಕರಿಸುವುದು ಅಥವಾ ಲೋಹದ ಭಾಗಗಳನ್ನು ಜೋಡಿಸುವುದು, ಕೊರೆಯುವುದು, ಒತ್ತುವುದು, ಅರದಿಂದ ಉಜ್ಜುವುದು, ನಯಗೊಳಿಸುವುದು.

(xi) ಫೋಟೋಗ್ರಾಫಿ ಸ್ಟುಡಿಯೋ.

(xii) ರೇಡಿಯೋವನ್ನು (ನಿಸ್ತಂತು ಸ್ವೀಕರಣ ಸೆಟ್) ರಿಪೇರಿ ಮಾಡುವುದು, ಸಜ್ಜುಗೊಳಿಸುವುದು ಮತ್ತು ತಯಾರಿಸುವುದು.

(xiii) ಬೆಳ್ಳಿ ಕೆಲಸ ಮಾಡುವುದು.

(xiv) ವಿದ್ಯುಚ್ಛಕ್ತಿ ಸಹಾಯದಿಂದ, ಹತ್ತಿ, ರೇಷ್ಮೆ, ರ್‍ಸಲ್ಕ್ ಅಥವಾ ಸೆಣಬು ಅಥವಾ ಉಣ್ಣೆ ನೂಲು ತೆಗೆಯುವುದು ಅಥವಾ ನೇಯುವುದು.

(xv) ಕಲ್ಲು ಸಾಣೆ ಮಾಡುವುದು, ಕತ್ತರಿಸುವುದು, ಸಜ್ಜು ಮಾಡುವುದು ಅಥವಾ ನಯಗೊಳಿಸುವುದು.

(xvi) ಯಂತ್ರ ಅಥವಾ ವಿದ್ಯುಚ್ಛಕ್ತಿಯಿಂದ ದಿಮ್ಮಿ ಅಥವಾ ಮರ ಕೊಯ್ಯುವುದು ಅಥವಾ ಕತ್ತರಿಸುವುದು.

(xvii) ತವರದ ಕೆಲಸ ಮಾಡುವುದು.

(xviii) ಮಡಿವಾಳ (ದೋಭಿ) ವೃತ್ತಿ.

(xix) ವಿದ್ಯುತ್, ಅನಿಲ ಅಥವಾ ಯಾವುದೇ ಕ್ರಮದಿಂದ ಲೋಹವನ್ನು ಬೆಸೆಯುವುದು- ಇವುಗಳ ಕಸಬು ಅಥವಾ ವ್ಯವಹಾರವನ್ನು ಅಥವಾ ಈ ಕಸಬಿಗೆ ಸಂಬಂಧಿಸಿದ ಯಾವುದೇ ಕರ್ಾಯಚರಣೆಯನ್ನು ನಡೆಸುವುದು.

22. ಈ ಕೆಳಕಂಡ ಯಾವುದೇ ವಸ್ತುವನ್ನು ಯಾವುದೇ ಕ್ರಮದ ಮೂಲಕ ತಯಾರಿಸುವುದು, ಹುರಿಯುವುದು,ಪ್ಯಾಕ್ ಮಾಡುವುದು, ಒತ್ತುವುದು, ಶುದ್ಧಿಗೊಳಿಸುವುದು, ಸ್ವಚ್ಛಗೊಳಿಸುವುದು, ಕುದಿಸುವುದು, ಕರಗಿಸುವುದು, ಅರೆಯುವುದು ಅಥವಾ ಸಿದ್ಧಗೊಳಿಸುವುದು.

(i) ಏರಿಯೇಟೆಡ್ ವಾಟರ್

(ii) ಬೇಕ್ಲೈಟ್ ಸರಕುಗಳು

(iii) ಬೀಡಿಗಳು (ದೇಶೀಯ ಸಿಗರೇಟುಗಳು), ನಶ್ಯ, ಚುಟ್ಟಾಗಳು ಅಥವಾ ಸಿಗರೇಟ್ ಗಳು

(iv) ಬಿಟುಮನ್

(v) ಸಿಡಿಮದ್ದು

(vi) ಎಲುಬುಗಳು

(vii) ಕೈ ಯಿಂದ ಇಟ್ಟಿಗೆಗಳನ್ನು ಅಥವಾ ಹೆಂಚುಗಳನ್ನು ತಯಾರಿಸುವುದು

(viii) ಯಂತ್ರ ಶಕ್ತಿಯ ಮೂಲಕ ಇಟ್ಟಿಗೆಗಳನ್ನು ಅಥವಾ ಹೆಂಚುಗಳನ್ನು ತಯಾರಿಸುವುದು

(ix) ಬ್ರಷ್ಗಳು

(x) ಮೇಣದ ಬತ್ತಿಗಳು

(xi) ಕರುಳುಹುರಿ

(xii) ಸೆಲ್ಯುಲಾಯ್ಡ್ ಅಥವಾ ಸೆಲ್ಯುಲಾಯ್ಡ್ ಸರಕುಗಳು

(xiii) ಸಿಮೆಂಟ್ ಕಾಂಕ್ರಿಟ್ ವಿನ್ಯಾಸಗಳು ಅಥವಾ ಮಾದರಿಗಳು

(xiv) ಇದ್ದಲು

(xv) ರಾಸಾಯನಿಕಗಳು

(xvi) ಯಾವುದೇ ಕಸುಬಿಗೆ ಸಂಬಂಧಪಟ್ಟ ಚಲನಚಿತ್ರ ಫಿಲಂಗಳ ಪಟ್ಟಿಗೆಗಳು

(xvii) ಕಾಂತಿರ್ವ್ಧಕಗಳು ಅಥವಾ ಪ್ರಸಾಧನ ಸರಕುಗಳು

(xviii) ಹತ್ತಿ, ಹತ್ತಿಕಸ, ಹತ್ತಿಜಂಗು, ಹತ್ತಿನೂಲು, ರೇಷ್ಮೆ, ರೇಷ್ಮೆನೂಲಿನ ಜುಂಗನ್ನೊಳಗೊಂಡ ರೇಷ್ಮೆ, ರ್ಷ್ಟ ಸಿಲ್ಕ್ ಜುಂಗು, ರ್ಷ್ಟ ಸಿಲ್ಕ್ ನೂಲು, ಉಣ್ಣೆ ಅಥವಾ ಉಣ್ಣೆಯ ಕಸ ಅಥವಾ ಜುಂಗು

(xix) ಹತ್ತಿ ಬೀಜಗಳು

(xx) ಡಾಮರ್

(xxi) ಡೈನಾಮೈಟ್

(xxii) ಕೊಬ್ಬು

(xxiii) ಬಿರುಸು ಬಾಣಗಳು (ಸುಡುಮದ್ದು)

(xxiv) ಅಗಸೆನಾರು

(xxv) ಮುದ್ರಣ, ಬರವಣಿಗೆ, ಮುದ್ರಿಸುವುದು ಇತ್ಯಾದಿಗಳಿಗಾಗಿ ಮಸಿ

(xxvi) ಅನಿಲ

(xxvii) ತುಪ್ಪ

(xxviii) ಗಾಜು ಅಥವಾ ಗಾಜಿನ ವಸ್ತುಗಳು

(xxix) ಕೋವಿ ಮದ್ದು (ಗನ್ ಪೌಡರ್)

(xxx) ಸೆಣಬು

(xxxi) (ಡ್ರೈ ಐಸ್ ಒಳಗೊಂಡು) ಮಂಜುಗಡ್ಡೆ

(xxxii) ಕೀಟನಾಶಕ ಅಥವಾ ಸೋಂಕು ನಿವಾರಕಗಳು

(xxxiii) ರೇಷ್ಮೆ, ಬಟ್ಟೆ ಅಥವಾ ರೆಕ್ಸಿನ್ ಬಟ್ಟೆ ಅಥವಾ ನೀರಿಳಿಯದ ಬಟ್ಟೆ

(xxxiv) ಸುಣ್ಣ

